


# ಘನಹಿಮ ಕರಗುವ ಹಾಗೆ

ನನ್ನೆದುರಿಗೆ ನಿಂತ ಮಾಯಿ
ವೈನು ತುಂಬಿಕೊಂಡು ತುಳುಕುತ್ತಾ ಹರಿಯುತ್ತಿದ್ದಾಳೆ
ಎಲ್ಲವೂ ಚಲಿಸುತ್ತವೆ ಅವಳ ಹೆಜ್ಜೆಯೊಡನೆ, ನಾನೂ

ಹಟಕ್ಕೆ ಬಿದ್ದ ಹುಡುಗನೆದೆ ಪರಚುವ ಮಾರ್ಜಾಲವೇ
ಕಾಯುತ್ತಿದ್ದೇನೆ ಮೋಡಗಳ ಆಣಿಗೊಳಿಸಿ ಸ್ಪರ್ಶ ಸುಖಕ್ಕೆ
ಮುಖ ಹುದುಗಿಸಲು ನಿನ್ನ ಎದೆ ಕಡಲ ಧ್ಯಾನ

ನಿನ್ನ ಕಣ್ಣುಗಳ ಮೌನಕ್ಕೆ ಸಿಕ್ಕಿ ನಿಂತ ಘನಹಿಮದಂಥ ನನಗೆ
ನವಿರು ಪಾದಗಳ ಬಿಸಿ ತಾಕಿಸು ಉಸಿರ ನಶೆ ತಾಕಿಸು
ಕಳೆದು ಹೋಗುವ ಯೌವನಕ್ಕಷ್ಟು ಕಾಡುವ ನೆನಪುಗಳ ಉಳಿಸು
ಈ ರಾತ್ರಿ ಚಂದ್ರ ಉರಿದುಹೋಗುವ ಹಾಗೆ ಬೆಳಗು ನನ್ನ ಮೇಲೆ



**ಕೃಷ್ಣ ದೇವಾಂಗಮಠ**
ಕಲೆ: ಡಿ.ಕೆ. ರಮೇಶ್